೨ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪಾಂಡವಪುರ.

**ಸಿ.ಸಿ. 410/2022**

ಸಾಕ್ಷಿದಾರರ ಹೇಳಿಕೆ ಃ

| | | | |
|---|---|---|---|
| ಹೆಸರು | ಃ ಮಹೇಶ | ಚಾಸಾಃ **4** | ಪ್ರಾಸಾಃ **4** |
| ತಂದೆಯ ಹೆಸರು | ಃ ಲೇಟ್ ಪಾಪಣ್ಣ | | |
| ವಯಸ್ಸು | ಃ 54 ವರ್ಷ | | |
| ವೃತ್ತಿ | ಃ ಬಿ.ಇ.ಒ. ಮಡಿಕೇರಿ | | |
| ವಾಸಸ್ಥಳ | ಃ ಮಡಿಕೇರಿ | | |

ದಿನಾಂಕಃ **18.08.2025** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ.ರವರಿಂದ ಃ

**01.** ಆಗಸ್ಟ್ **2018** ರಿಂದ ದಿಃ**28.06.2022** ರ ವರೆಗೂ ಪಾಂಡವಪುರದಲ್ಲಿ ಕಾರ್ಯ ನಿರ್ವಾಹಕನಾಗಿ**,** ತಾಲ್ಲೂಕು ಪಂಚಾಯಿತಿ**,** ಪಾಂಡವಪುರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೆ**.**

**02.** 2021ನೇ ಸಾಲಿನಲ್ಲಿ ದೊಡ್ಡಬ್ಯಾಡರಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಸಾರ್ವಜನಿಕರಿಗೆ ಕುಡಿಯುವ ನೀಡಿನ ಟ್ಯಾಂಕ್ ನಿರ್ಮಾಣ ಮಾಡಲು ಕ್ರಮ ವಹಿಸಲಾಗಿತ್ತು. ಸ್ಥಳ ಪರಿಶೀಲನೆಗಾಗಿ ಪಿ.ಡಿ.ಒ., ತಹಶೀಲ್ದಾರ್ ರವರು, ಪೊಲೀಸರು, ನಾನು, ವಿ.ಎ., ಆರ್.ಐ.

ಎಲ್ಲ ಸರ್ಕಾರಿ ಜಾಗದ ಬಳಿ ಹೋಗಿದ್ದೆವು. ಬಾಜುದಾರರಾದ ದೇವರಾಜು, ಪ್ರಕಾಶ್ ಮತ್ತು ಲಿಂಗರಾಜು ಎಲ್ಲರು ಬಂದರು, ಸ್ಥಳದಲ್ಲಿ ಗಡಿ ಗುರುತಿಸಲಾಯಿತು. ಕಲ್ಲು ನೆಟ್ಟೆವು. ಸಾರ್ವಜನಿಕ ಹಿತ ದೃಷ್ಟಿಯಿಂದ ಯಾವುದೇ ಸಂಘರ್ಷ ಆಗಬಾರದು ಎಂದು ಹೇಳಿ ಬಂದೆವು. ಅದೇ ದಿನ ಸಂಜೆ 8.00 ಗಂಟೆಗೆ ಪಿ.ಡಿ.ಒ.ರವರು ಕಲ್ಲನ್ನು ಆರೋಪಿ-1 ರಿಂದ 3 ರವರು ಕಿತ್ತು ಹಾಕಿರುವ ಬಗ್ಗೆ ತಿಳಿಸಿದರು. ದಿ:17.06.2021 ಪಿ.ಡಿ.ಒ. ರವರು ಪಂಚಾಯಿತಿಯ ಸಿಬ್ಬಂದಿ ಸಿದ್ದರಾಜುರವರಿಗೆ ಆರೋಪಿಗಳು ಬೈದು ಕಲ್ಲು ಕಿತ್ತು ಹಾಕಿರುವುದಾಗಿ ತಿಳಿಸಿದರು. ಪಿ.ಡಿ.ಒ. ಪೊಲೀಸ್ ಠಾಣೆಯ ದೂರು ನೀಡಿರುವುದಾಗಿ ತಿಳಿಸಿದರು. ಆರೋಪಿಗಳು ಸ್ಥಳ ಪರಿಶೀಲನೆಗೆ ಹೋದಾಗ ನಮಗೆ ಯಾವುದೇ ತೊಂದರೆ ನೀಡಿಲ್ಲ.

**(**ಈ ಹಂತದಲ್ಲಿ ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ.ರು ಅನುಮತಿ ಕೋರಿರುತ್ತಾರೆ. ಅನುಮತಿಸಲಾಯಿತು.**)**

<u>ಪಾಟೀ ಸವಾಲು ಃ ಸ.ಸ.ಅ.ರವರಿಂದ ಃ</u>

**01.** ದಿನಾಂಕ:17.09.2021 ರಂದು ಚಾ.ಸಾ-2 ರವರನ್ನು ಕೆಲಸ ನಿರ್ವಹಿಸದಂತೆ ಆರೋಪಿಗಳು ಅಡ್ಡಿಪಡಿಸಿರುವುದಾಗಿ ಚಾ.ಸಾ-1 ರವರು ನನಗೆ ತಿಳಿಸಿದರು ಎಂದರೆ ಸರಿ. ಪೊಲೀಸರಿಗೆ ಹೇಳಿಕೆ ನೀಡಿಲ್ಲ. ದಿ:21.09.2021 ರ ಸಾಕ್ಷಿಯ ಹೇಳಿಕೆಯನ್ನು ಓದಿ ಹೇಳಲಾಗಿ, ಸಾಕ್ಷಿಯು ನಿರಾಕರಿಸಿದ್ದು, ತಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ ಎಂದು ಹೇಳಿದ ಕಾರಣ ಸದರಿ ನಿರಾಕರಿಸಿದ ಹೇಳಿಕೆಯನ್ನು ನಿಪಿ-**2** ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು ಃ ಆರೋಪಿತರ ಪರ ವಕೀಲರಾದ ಶ್ರೀ ಡಿ.ಆರ್.ಕೆ.ರವರಿಂದ ಃ</u>

**01**. ನನ್ನ ಮುಖ್ಯ ವಿಚಾರಣೆಯಲ್ಲಿ ಸ್ಥಳಕ್ಕೆ ಬೇಟಿ ನೀಡಿದ ಬಗ್ಗೆ ಪೊಲೀಸರಿಗೆ ಹೇಳಿಕೆ ನೀಡಿಲ್ಲ ಎಂದರೆ ಪೊಲೀಸರು ನಮ್ಮ ಜೊತೆಗೆ ಇದ್ದರು ಹೇಳಿಕೆ ನೀಡಿಲ್ಲ ಎಂದು ನುಡಿಯುತ್ತಾರೆ. ಯಾವುದೇ ಸ್ಥಳಕ್ಕೆ ಬೇಟಿ ನೀಡುವ ಮೊದಲು ನಮ್ಮ ಕಛೇರಿಯ ಚಲನ ವಲನ

ದಲ್ಲಿ ನಮೂದಿಸಬೇಕು ಎಂದರೆ ಸರಿ. ನಮ್ಮ ಕಛೇರಿಯಲ್ಲಿ ಇಟ್ಟಿರುವ ಚಲನ ವಲನ ಪುಸ್ತಕದಲ್ಲಿ ದಿಃ16.09.2021 ರಂದು ಸ್ಥಳಕ್ಕೆ ಬೇಟೀ ನೀಡಿದ ಬಗ್ಗೆ ನಮೂದಿಸಿಲ್ಲ, ಏಕೆಂದರೆ ಅದು ನಿಗದಿತ ದಿನಾಂಕ ನಮೂದಿಸದೆ ತುರ್ತಾಗಿ ಬಂದ ಕರ್ತವ್ಯವಾದ ಕಾರಣ ಹಾಗೇ ಹೊರಟೆನು. ಯಾವುದೇ ಸ್ಥಳಕ್ಕೆ ಬೇಟಿ ನೀಡುವ ಮೊದಲು ಬಾಜುದಾರರಿಗೆ ನೋಟೀಸ್ ಕೊಟ್ಟು ದಾಖಲೆಗಳನ್ನು ಪರಿಶೀಲಿಸಿ ಹೋಗಬೇಕು ಎಂದರೆ ಸರಿ. ಸಾಕ್ಷಿಯು ತಹಶೀಲ್ದಾರ್ ರವರು ಕರೆದ ಕಾರಣ ನಾನು ಹೋಗಿದ್ದೇನೆ ಎಂದು ನುಡಿಯುತ್ತಾರೆ. ಸ್ಥಳದ ಮಾಲೀಕರ, ಬಾಜುದಾರರ ಮಾಹಿತಿ ನನಗೆ ಇರಲಿಲ್ಲ ಎಂದರೆ ಸರಿ. ಸರ್ಕಾರಿ ಜಾಗದಲ್ಲಿ ಟ್ಯಾಂಕ್ ನಿರ್ಮಿಸಲು ಹೋಗಿದ್ದೆವು. ಪಕ್ಕದ ಸರ್ವೇ ನಂಬರ್ ಮಾಲೀಕರು ಗಲಾಟೆ ಮಾಡಿದರು, ಅದು ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವುದಿಲ್ಲ. ನಮ್ಮ ಪಂಚಾಯಿತಿಯ ಟ್ಯಾಂಕ್ ನಿರ್ಮಿಸಲು ಯೋಜಿಸಿದ್ದ ಸರ್ಕಾರಿ ಸ್ವತ್ತಿನ ನಂಬರ್ ನನಗೆ ಗೊತ್ತಿಲ್ಲ. ನನಗೆ ಯಾವುದೇ ಸ್ವತ್ತಿನ ಮಾಹಿತಿ ಇಲ್ಲದಿದ್ದರು ಆರೋಪಿಗಳ ವಿರುದ್ಧ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಸ್ಥಳಕ್ಕೆ ಹೋಗಿಲ್ಲ, ಗಡಿ ಗುರುತಿಸಿಲ್ಲ, ಆರೋಪಿಗಳು ಕಲ್ಲು ಸಹ ಕಿತ್ತು ಹಾಕಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕು ಆರೋಪಿಗಳಿಗೂ ಯಾವುದೇ ಸಂಬಂದವಿಲ್ಲದಿದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸ. ಇದೆ.

**C/C 2** ನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,
ಸಾಕ್ಷಿದಾರರ ಸಹಿ. ಪಾಂಡವಪುರ.